ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ ದಿನಾಂಕ : DATE 25/3/2021

# ಕುಲಪತಿ ವಿಚಾರಣೆಗೆ ರಾಜ್ಯಪಾಲ ಹಸಿರು ನಿಶಾನೆ

» ಬೆಂವಿವಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮದ ಬಗ್ಗೆ ತನಿಖೆ

ಬೆಂಗಳೂರು: ಜ್ಞಾನಭಾರತಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅವ್ಯವಹಾರ ಹಾಗೂ ಆಡಳಿತ ವೈಫಲ್ಯತೆ ಕುರಿತು ಪೂರ್ವಭಾವಿ ತನಿಖೆ ನಡೆಸಲು ರಾಜ್ಯಪಾಲರು ಹಸಿರುನಿಶಾನೆ ತೋರಿಸಿದ್ದಾರೆ.

ಅವ್ಯವಹಾರಗಳ ತನಿಖೆಗೆ ಉನ್ನತ ಶಿಕ್ಷಣ ಇಲಾಖೆ ಈ ಹಿಂದೆಯೇ ಆದೇಶಿಸಿತ್ತು. ಇದಕ್ಕಾಗಿ ಪತ್ಯೇಕ ಸಮಿತಿ ರಚಿಸಿತ್ತು. ಸಮಿತಿಯು ಕುಲಪತಿ ವೇಣುಗೋಪಾಲ್ ಅವರನ್ನು ಪ್ರಶ್ನಿಸಲು ಮುಂದಾದಾಗ ರಾಜ್ಯಪಾಲರದಿಂದ ಅನುಮತಿ ಪಡೆಯಬೇಕೆಂದು ಹೇಳಿದ್ದರು.

ಇದು ಸತ್ಯ ಶೋಧನಾ ಪ್ರಕ್ರಿಯೆಯಾಗಿರುತ್ತದೆ. ಇದನ್ನು ನಡೆಸಲು ಪ್ರತ್ಯೇಕ ಪ್ರಮಾಣಿತ ಪ್ರಕ್ರಿಯೆ ಇರುವುದಿಲ್ಲ. ಸನ್ನಿವೇಶಗಳು ಅವಶ್ಯಪಡಿಸುವ ಅಗತ್ಯತೆಗಳಿಗೆ ಅನುಗುಣವಾದ ಸೂಕ್ತ ವಿಧಾನದನ್ವಯ ಪೂರ್ವಭಾವಿ ತನಿಖೆ ನಡೆಸಬಹುದಾಗಿದೆ. ಈ ವಿಚಾರವನ್ನು ರಾಜ್ಯಪಾಲರ ಗಮನಕ್ಕೂ ತಂದಿದ್ದು, ಒಪ್ಪಿಗೆ ಸೂಚಿಸಿದ್ದಾರೆ. ತಕ್ಷಣ ತನಿಖೆ ಕೈಗೆತ್ತುಕೊಂಡು ಸಾಧ್ಯವಾದಷ್ಟು ಬೇಗ ವರದಿ ನೀಡುವಂತೆ ಸಮಿತಿ ಸದ್ಯರಿಗೆ ಉನ್ನತ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿ ತಿಳಿಸಿದ್ದಾರೆ.

ನಿಯಮಗಳನ್ನು ತೂರಿ ಮುಂಬಡ್ತಿ, ಕುಲಪತಿ ಮತ್ತು ಕುಲಸಚಿವರ ಕಿತ್ತಾಟ, ಕುಲಸಚಿವರನ್ನು ವರ್ಗಾವಣೆ ಮಾಡುವಂತೆ ಬೆಂ.ವಿವಿ ನೌಕರರ ಸಂಘ ನಡೆಸಿದ ಪ್ರತಿಭಟನೆ ಸೇರಿ ಹಲವು ವಿಚಾರಗಳನ್ನು ಸೂಕ್ಷ್ಮವಾಗಿ ಗಮನಿಸಿರುವ ಉನ್ನತ ಶಿಕ್ಷಣ ಇಲಾಖೆಯು ತನ್ನ ಅಧಿಕಾರ ಚಲಾಯಿಸಲು ಮುಂದಾಗಿದೆ.